ದಿಃ 14.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನೀವು ಬಾಗೇಪಲ್ಲಿ ಯಲ್ಲಿ ವಾಸವಾಗಿದ್ದೀರ ಎಂದರೆ ಸದ್ದಪಲ್ಲಿಗೂ ಹೋಗಿ ಬರುತ್ತಿರುತ್ತೇನೆ. ಗೋವಿಂದರೆಡ್ಡಿ ರವರು ಅವರ ಅಣ್ಣ ತಮ್ಮಂದಿರ ಮೇಲೆ ದಾವೆ ದಾಖಲಿಸಿದ್ದಾರೆ. ಮಾರಿರುವ ಜಮೀನಿಗೆ ಸಂಬಂಧಿಸಿದಂತೆ ದಾವೆ ದಾಖಲಿಸಿದ್ದಾರೆ. ದಾವಾ ಸ್ವತ್ತುಗಳು ಯಾರ ಹೆಸರಿಗೆ ಇದೆ ನೋಡಿಲ್ಲ. ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಗೊತ್ತಿಲ್ಲ. ಯಾರು ಸ್ವಾಧೀನದಲ್ಲಿ ಇದ್ದಾರೆ ಗೊತ್ತಿಲ್ಲ, ಯಾಕೆಂದರೆ ಅದು ಖಾಲಿ ಜಾಗ.

**2.** ಸರ್ವೇ ನಂ. 47/2 ರಲ್ಲಿ ಇರುವ ಜಮೀನಿನ ಪೈಕಿ 2 ಗುಂಟೆಯಲ್ಲಿ 11 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಅದು ಖಾಲಿ ಜಾಗ ಇರುವುದರಿಂದ ಹೇಳಲಾಗುವುದಿಲ್ಲ. ಸದರಿ ಸರ್ವೇ ನಂ. 4 ಗುಂಟೆ ಜಾಗದಲ್ಲಿ ಬಯ್ಯಪ್ಪರೆಡ್ಡಿ 12 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಅದು ಖಾಲಿ ಜಾಗ ಇರುವುದರಿಂದ ಹೇಳಲಾಗುವುದಿಲ್ಲ. ಸದರಿ ಸ್ವತ್ತಿನಲ್ಲಿ ಪಾಯ ಹಾಕಿದ್ದಾರೆ ಎಂದರೆ ಯಾರು ಹಾಕಿದ್ದಾರೆ ಗೊತ್ತಿಲ್ಲ. ಅಲ್ಲಿ 12 ನೇ ಪ್ರತಿವಾದಿ ಬೆಳೆ ಬೆಯುತ್ತಿದ್ದಾರೆ ಎಂದರೆ ಗೊತ್ತಿಲ್ಲ.

**3.** ರಾಮಚಂದ್ರ ರೆಡ್ಡಿ ರವರು ಬಿ ವಿ ರಾಮಚಂದ್ರ ರೆಡ್ಡಿ ರವರಿಗೆ ಸರ್ವೇ ನಂ. 47/2 ರಲ್ಲಿ ದಿಃ 18.01.1995 ರಂದು 6 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ವಿಷಯ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 9 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ಒಟ್ಟಿಗೆ ಉಳಿಮೆ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ